MYSORE LEGISLATIVE ASSEMBLY

FORTY-FIRST DAY.

Saturday, 29th September 1956.

The House met in the Assembly Hall, Atara Kacheri, Bangalore, at Thirty Minutes past Eight of the Clock.

MR. SPEAKER [SRI H. S. RUDRAPPA, B.SC., LL.B.] in the Chair.

QUESTIONS AND ANSWERS

Thoties and Talaries (Extraction of free service by Shanbhogues).

Q.—828. Sri T. HANUMIAH (Hiriyur—Scheduled Castes).—

Will the Government be pleased to state :—

whether it has come to their notice that patels and shanbhogues in the State are extracting free service from thoties and thalaries in respect of Government work ?

A.—Sri H. M. CHANNABASAPPA (Minister for Revenue and Agriculture).—

No such instance has been brought to the notice of Government.

*ಶ್ರೀ ಟಿ. ಹನುಮಯ್ಯ.—ಗ್ರಾಮಾಂತರಗಳಲ್ಲಿ ತೋಟಿ ತಳವಾರರುಗಳ ಕೈಯ್ಯಲ್ಲಿ ಕೆಲಸ ಉಚಿತವಾಗಿ ಮಾಡಿಸುತ್ತಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೆ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಸರ್ಕಾರಿ ಕೆಲಸಮಾಡುತ್ತಿದ್ದಾರೆಂದು ಗಮನಕ್ಕೆ ಬಂದಿದೆ.

ಶ್ರೀ ಟಿ. ಹನುಮಯ್ಯ.—ಸರ್ಕಾರಿ ಕೆಲಸವನ್ನು ಅವರಿಂದ ಉಚಿತವಾಗಿ ಮಾಡಿಸುತ್ತಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಟಿ. ಹನುಮಯ್ಯ.—ಗ್ರಾಮಾಂತರಗಳಲ್ಲಿ ಪ್ರತಿ ನಿತ್ಯವೂ ಕೂಡ ಪಟೇಲ ಶ್ಯಾನುಭೋಗರು ಗ್ರಾಮಾಂತರದ ರೆವೆನ್ಯೂ ಕೆಲಸವನ್ನು ತೋಟಿ ತಳವಾರರುಗಳಿಂದ ಸರ್ಕಾರಿ ನೌಕರರಿಂದ ಕೆಲಸ ಮಾಡಿಸುವಂತೆ ಮಾಡಿಸುತ್ತಿರುವುದು ಗಮನಕ್ಕೆ ಬಂದಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತೋಟಿ ತಳವಾರರುಗಳಿಂದ ಕಾನೂನಿನಲ್ಲಿ ವಿಧಾಯಕವಾಗಿರುವಂತೆ ಸರ್ಕಾರಿ ಕೆಲಸವನ್ನು ಮಾಡಿಸುವುದು ಶಾಸನ ಬದ್ಧವಾಗಿದೆ.

ಶ್ರೀ ಟಿ. ಹನುಮಯ್ಯ.—ಆ ಕಾನೂನು ಯಾವುದು, ಸ್ವಾಮಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಏಲೇಜ್ ಆಫೀ ಸರ್ಸ್ ರೆಗ್ಯುಲೇಷ್ಷ.

ಶ್ರೀ ಟಿ. ಹನುಮಯ್ಯ.—ಭಾರತದ ರಾಜ್ಯಾಂಗ ಜಾರಿಗೆ ಬಂದ ಮೇಲೆ ಆ ರೆಗ್ಯುಲೇಷ್ಷ ಮಾಡಿದೆಯೆ ಅಥವಾ ನೂರು ವರ್ಷಗಳ ಕೆಳಗೆ ಮಾಡಿದ್ದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲಾ ರಾಜ್ಯಾಂಗಕ್ಕನುಗುಣವಾಗಿಯೇ ಇದೆ.

ಶ್ರೀ ಟಿ. ಹನುಮಯ್ಯ.—ಹಾಗಾದರೆ ರಾಜ್ಯಾಂಗದ 23ನೆಯ ಆರ್ಟಿಕಲ್ಲಿನ ಒಂದನೆಯ ಮತ್ತು ಎರಡನೆಯ ಪ್ಯಾರಾಗಳಿಗೆ ಅನುಗುಣವಾಗಿ ತಮ್ಮ ರೆಗ್ಯುಲೇಷ್ಷ ಇದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದೆ.

ಶ್ರೀ ಟಿ. ಹನುಮಯ್ಯ.—ರಾಜ್ಯಾಂಗದ 23ನೆಯ ಆರ್ಟಿಕಲ್ಲಿನಲ್ಲಿ ಹೀಗಿದೆ:—

"23 (1) Traffic in human beings and begar other similar forms of forced labour are prohibited and any contravention of this provision shall be an offence punishable in accordance with law.

(2) Nothing in this article shall prevent the State from imposing compulsory service for public purposes, and in imposing such service the State shall not make any discrimination on grounds only of religion, race, caste or class or any of them."

ಅದರಂತೆ ಜಾರಿಗೆ ತರದೆ ಜಾತಿಯ ಆಧಾರದ ಮೇಲೆ ತಾನೆ ತಾವು ಕೆಲಸ ಮಾಡಿಸುತ್ತಿರುವುದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಆರ್ಟಿಕಲ್ಲಿಗೆ ಅನುಗುಣವಾಗಿಯೇ ನಡೆಯುತ್ತಿದೆ.

ಶ್ರೀ ಟಿ. ಹನುಮಯ್ಯ.—ಈಗ ಗ್ರಾಮಾಂತರಗಳಲ್ಲಿ forced labour ಮಾಡಿಸುತ್ತಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲ.

ಶ್ರೀ ಟಿ. ಹನುಮಯ್ಯ.—ಹಾಗೆವ ಮಾಡಿಸುತ್ತಿದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೆ ಮಾಡಬೇಡಿ ಎಂದು ತಿಳಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಮಾಡಕೂಡದೆಂದು ಫ್ಲಾನಿನಲ್ಲಿ ವಿಧಾಯಕ ಮಾಡಿದ್ದೇವೆ. ತಾವು ಹೇಳುವಂತೆ ಮಾಡುವುದು ನಿಜವಾದರೆ ಸಂಬಂಧಪಟ್ಟವರಿಗೆ ಸೂಕ್ತರೀತಿ ಶಿಕ್ಷೆ ಮಾಡುತ್ತೇವೆ.

ಶ್ರೀ ಜಿ. ದುಗ್ಗಪ್ಪ.—ತೋಟಿ ತಳವಾರುಗಳಿಂದ ಸರ್ಕಾರದವರು ಕೆಲಸ ತೆಗೆದುಕೊಳ್ಳುವುದಕ್ಕೆ ತಕ್ಕಂತೆ ಸಂಭಾವನೆ ಕೊಡಲು ವ್ಯವಸ್ಥೆ ಮಾಡಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾಡಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಯಾವ ರೀತಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ರೂಲ್ಸಿನಲ್ಲಿ ವಿಧಾಯಕವಾಗಿದೆ.

ಶ್ರೀ ಜಿ. ದುಗ್ಗಪ್ಪ.—ಅವರಿಗೆ ಹಣದ ರೂಪದಲ್ಲಿ ಸಂಭಾವನೆ ಕೊಡುತ್ತೀರಾ ಅಥವಾ ಬೇರೆ ರೂಪದಲ್ಲಿ ಕೊಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಳ್ಳಾರಿ ಜಿಲ್ಲೆಯಲ್ಲಿ ತಿಂಗಳಿಗೆ ಇಷ್ಟು ಎಂದು ತಲಬು ಕೊಡುತ್ತೇವೆ, ಬಳ್ಳಾರಿ ಬಿಟ್ಟು ಇತರ ಭಾಗಗಳಲ್ಲಿ ರೂಲ್ಸಿನಲ್ಲಿ ವಿಧಾಯಕವಾಗಿರುವಂತೆ ಪಡಿತರ ವರ್ಷಕ್ಕೆ ಎಕರೆಗಿಷ್ಟು ಎಂದು ಕೊಡಲ್ಪಡುತ್ತದೆ; ಇದರ ಜೊತೆಗೆ ಇನಾಂ ಜಮೀನನ್ನು ಸಹ ಕೊಟ್ಟಿದೆ.

ಶ್ರೀ ಜಿ. ದುಗ್ಗಪ್ಪ.—ಮಿರಾಸೆ ಪದ್ಧತಿ ಪ್ರಕಾರ ತೋಟಿ ತಳವಾರರು ಮತ್ತು ಇತರ ಗ್ರಾಮ ನೌಕರರಿಗೆ ಸರಿಯಾಗಿ ಸಂಭಾವನೆ ಸಿಕ್ಕುತ್ತಿಲ್ಲ, ಅವರಿಂದ ನಷ್ಟವಾಗಿದೆ, ಬಳ್ಳಾರಿ ಜಿಲ್ಲೆಯಲ್ಲಿರುವ ಹಾಗೆ ಸಂಗಳ ಸಂಬಳ ಕೊಡಬೇಕು ಎಂದು ಸರ್ಕಾರಕ್ಕೆ ಮನವಿ ಬಂದಿಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಆ ವಿಷಯ ಪ್ರಸ್ತಾಪಿಸಲ್ಪಡುತ್ತಿದೆ.

ಶ್ರೀ ಜಿ. ದುಗ್ಗಪ್ಪ.—ಮಂತ್ರಿಗಳು ಗ್ರಾಮಗಳ ಕಡೆ ಪ್ರವಾಸ ಕೈಕೊಂಡಾಗ ತೋಟಿ ತಳವಾರರುಗಳಿಂದ ಮತ್ತು ಗ್ರಾಮ ಸೇವಕರಿಂದ ಚಪ್ಪರ ಹಾಕಿಸುವುದು, ತೋರಣ ಕಟ್ಟಿಸುವುದು, ಗ್ರಾಮ ನೈರ್ಮಲ್ಯದ ಕೆಲಸ ಮಾಡಿಸುವುದು ಇವೆಲ್ಲಾ ಸರ್ಕಾರಿ ಕೆಲಸದ ಅಚ್ಚುಕಟ್ಟಿನಲ್ಲಿ ಬರುತ್ತವೆಯೋ ಅಥವಾ ಇಲ್ಲವೋ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವಯಾವ ಕೆಲಸ ಸರ್ಕಾರಿ ಕೆಲಸದ ಚೌಕಟ್ಟಿನಲ್ಲಿ ಬರುತ್ತದೆ, ಯಾವುದು ಬರುವುದಿಲ್ಲ ಎಂದು ಪಟ್ಟಿ ಮಾಡಿದರೆ ಹೇಳಬಹುದು.

ಶ್ರೀ ಎ. ಭೀಮಪ್ಪನಾಯಕ್.—ಸರ್ಕಾರದ ಕೆಲಸವನ್ನು ಅವರಿಂದ ಕಡ್ಡಾಯವಾಗಿ ಮಾಡಿಸುತ್ತಿದ್ದಾರೆಂದು ಹೇಳಿದರೆ ಅವರಿಗೆ ಸರ್ಕಾರದವರೇನಾದರೂ ಕ್ಯಾಷ್ ರೆಮ್ಯುನರೇಷನ್ ಕೊಡುತ್ತಿದ್ದಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಅಧಿಕೃತವಾಗಿ ಹೇಳಲಿಲ್ಲ. ಅದಕ್ಕಾಗಿ ಅವರಿಗೆ ಇನಾಂ ಜಮೀನುಗಳನ್ನು ಕೊಟ್ಟಿದ್ದೇವೆಂದು ಹೇಳಿದೆ.

ಶ್ರೀ ಎ. ಭೀಮಪ್ಪನಾಯಕ್.—ಹಾಗೆ ಇನಾಂ ಜಮೀನುಗಳನ್ನು ಎಲ್ಲರಿಗೂ ಕೊಟ್ಟಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವರ್ಗದ ನೌಕರಿ ಮಾಡತಕ್ಕವರಿಗೆಲ್ಲಾ ಕೊಟ್ಟಿದೆ.

ಶ್ರೀ ಎ. ಭೀಮಪ್ಪನಾಯಕ್.—ನಗದು ಹಣದ ರೂಪವಾಗಿ ಸಂಭಾವನೆಯನ್ನೇನಾದರೂ ಕೊಡುತ್ತಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಳ್ಳಾರಿ ಜಿಲ್ಲೆಯೊಂದು ಏನಾ ಮತ್ತೆಲ್ಲೂ ಹಾಗೆ ನಗದು ಹಣದ ರೂಪದಲ್ಲಿ ಯಾಂಗೂ ಸಂಭಾವನೆ ಕೊಡುತ್ತಿಲ್ಲ

ಶ್ರೀ ಎ. ಭೀಮಪ್ಪನಾಯಕ್.—ಜನರ ಕೆಲಸಕಾರ್ಯಗಳನ್ನು ಅವರು ಮಾಡಿಕೊಡುತ್ತಿರುವುದಕ್ಕಾಗಿ ಅವರು ಇವರಿಗೆ ಕಾಳು-ಕಡ್ಡಿ ಕೊಡುತ್ತಿದ್ದಾರೆ. ನಿಮ್ಮ ಕೆಲಸ ಮಾಡಿಸಿಕೊಳ್ಳತಕ್ಕ ಬಗ್ಗೆ ನೀವೇನು ಕೊಡುತ್ತೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರುಗಳಿಗೆಲ್ಲಾ ಸರ್ಕಾರಿ ಜಮೀನುಗಳನ್ನು ಇನಾಂತಿ ಹಾಕಿ ಕೊಡರಾಗಿದೆ ಎನ್ನುವ ವಿಚಾರ ಮಾನ್ಯ ಸದಸ್ಯರಿಗೂ ಗೊತ್ತಿರಬೇಕು.

ಶ್ರೀ ಎ. ಭೀಮಪ್ಪನಾಯಕ್.—ಮಾನ್ಯ ಮಂತ್ರಿಗಳು ಆ ಬಗ್ಗೆ ರೆಕಾರ್ಡ್ ತರಿಸಿ ನೋಡಿದ್ದರಲ್ಲವೇ ಅವರಿಗೆ ಈ ಬಗ್ಗೆ ಶೇಕಡ 97 ರಷ್ಟು ಜನರಿಗೆ ಇನಾಂ ಜಮೀನುಗಳನ್ನು ಕೊಟ್ಟಿರುವುದಿಲ್ಲವೆಂಬುದು ಗೊತ್ತಾಗುತ್ತಿತ್ತು. ಈಗಲಾದರೂ ಅವರು ದಯವಿಟ್ಟು ಆ ರೆಫರೆನ್ಸನ್ನು ತರಿಸಿನೋಡುವರೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—'ಶೇಕಡ 97 ರಷ್ಟು ಕೊಟ್ಟಿಲ್ಲ' ಎಂಬುದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಹೋಗಲಿ ತಾವು ಆ ರೀತಿ ಎಷ್ಟು ಪರ್ಸೆಂಟೇಜ್ ಜನರಿಗೆ ಕೊಟ್ಟಿಲ್ಲ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೋಟೀಸ್ ಕೆಟ್ಟರೆ ತಿಳಿಸುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—ಹೋಗಲಿ ಈಗಲಾದರೂ ತಾವು ದಯವಿಟ್ಟು ಆ ಪ್ಕೆಕಿ ಯಾರಾರಿಗೆ ಹಾಗೆ ಜಮೀನು ಕೊಟ್ಟಿರುವುದಿಲ್ಲ ಎನ್ನುವುದನ್ನು ವಿಮರ್ಶೆಮಾಡಿ ನೋಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಗತ್ಯವಾಗಿ ಮಾಡುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—ಬಳ್ಳಾರಿಯ ಜಿಲ್ಲೆಯಲ್ಲಿ ಇವರಿಗೆ ದುಡ್ಡಿನ ರೂಪವಾಗಿ ಸಂಭಾವನೆ ಕೊಡುತ್ತಿರುವ ಹಾಗೆ ಬಾಕಿ ಕಡೆಯಲ್ಲಿರತಕ್ಕವರಿಗೂ ಕೊಡುವಂತೆ ಏರ್ಪಾಡುಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಕೂಡ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ರಾಚಯ್ಯ.—ತಾವು ಆಗಲೇ ತಿಳಿಸಿದಂತೆ ಮಿರಾಸೆ ವಿಚಾರದಲ್ಲಿ ಪ್ರತಿ ವರ್ಷವೂ ಎಷ್ಟು ವಸೂರಾಯಿತು, ಎಷ್ಟು ಬಾಕಿ ನಿಂತಿದೆ ಎನ್ನತಕ್ಕ ಬಗ್ಗೆ ತಾವೇನಾದರೂ ಒಂದು ಬ್ಯಾರೆಟ್ಸ್‌ಷೀಟ್ ತಯಾರಿಸುತ್ತಿದ್ದೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ವರ್ಷದ್ದನ್ನೆಲ್ಲಾ ಪೂರ್ತಿಯಾಗಿ ವಸೂರ್ಮಾಡಿಕೆ ಳ್ಳುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ಯಾರಿಗೆ ವಸೂರ್ಮಾಡಿಕೊಳ್ಳುವ ಚೈತನ್ಯವಿದೆಯೋ ಅಂಥವರು ಮಾತ್ರ ವಸೂರ್ಮಾಡಿಕೊಂಡಿದ್ದಾರೆ. ಹಾಗೆ ಚೈತನ್ಯವಿಲ್ಲದವರಿಗೆ ಆ ಮಿರಾಸೆ ಕಾಳನ್ನು ಯಾರೂ ಕೊಟ್ಟಿಲ್ಲವೆಂಬ ಅಂಶ ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲ.

ಶ್ರೀ ಬಿ. ರಾಚಯ್ಯ.—ಈಗ ತಾವು ವಸೂರ್ಮಾಡತಕ್ಕೆ ಕಂದಾಯದ ಮೊಬಲಗಿನ ಮೇಲೆ ಪೋಟಿಗೆಯನ್ನು ಪಾವತಿಮಾಡುತ್ತಿದ್ದೀರಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು.

ಶ್ರೀ ಬಿ. ರಾಚಯ್ಯ.—ಅದೇ ರೀತಿ ಇವರಿಗೂ ಕೊಡಲು ಆಲೋಚನೆ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಚಾರವೂ ಕೂಡ ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.